ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಬಿಪಿಎಲ್ ಅಡಿಯಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ; ಕುಂದಾಪುರ ವಿಧಾನ ಸಭಾ ವ್ಯಾಪ್ತಿಯಲ್ಲಿ ಗುರುತಿಸಲಾದ ಫಲಾನುಭವಿಗಳೆಷ್ಟು;

ಆ) ಗುರುತಿಸಲಾದ ಫಲಾನುಭವಿಗಳಿಗೆ ಪಡಿತರ ಚೀಟಿ ನೀಡಲಾಗಿದೆಯೇ; ನೀಡಿದಲ್ಲಿ ಕುಂದಾಪುರ ಕ್ಷೇತ್ರದಲ್ಲಿ ಎಷ್ಟು ಜನರಿಗೆ ನೀಡಲಾಗಿದೆ; ಉಳಿದವರಿಗೆ ಯಾವಾಗ ನೀಡಲಾಗುವುದು;

ಇ) ಬಿಪಿಎಲ್ ಪಟ್ಟಿಯಲ್ಲಿ ಗುರುತಿಸಲು ಬಿಟ್ಟು ಹೋದವರನ್ನು ಗುರುತಿಸಿ, ಅವರಿಗೆ ಪಡಿತರ ಚೀಟಿ ಕೊಡಲು ಕ್ರಮ ಕೈಗೊಳ್ಳಲಾಗುವುದೇ;

ಈ) ಪಡಿತರ ಚೀಟಿ ವಿತರಿಸಿದ ಫಲಾನುಭವಿಗಳಿಗೆ ಯಾವಾಗಿನಿಂದ ಪಡಿತರ ಸಾಮಗ್ರಿಗಳನ್ನು ಕೊಡಲಾಗುವುದು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಮನೆ ಮನೆ ಸಮೀಕ್ಷಾ ಕಾರ್ಯ ಅಂತಿಮ ಹಂತದಲ್ಲಿದ್ದು ಜುಲೈ. ೨೦೦೫ರ ಅಂತಕ್ಕೆ ಪೂರ್ಣಗೊಳ್ಳುವುದು. ಬಿಪಿಎಲ್ ಪಡಿತರ ಚೀಟಿದಾರರ ನಿರ್ದಿಷ್ಟ ಕುಟುಂಬಗಳ ಸಂಖ್ಯೆಯನ್ನು ಸರ್ವೇ ಕಾರ್ಯ ಮುಗಿದ ನಂತರವೇ ನೀಡಬಹುದಾಗಿದೆ.

ಆ) ಸರ್ವೇ ಕಾರ್ಯ ಮುಗಿದ ನಂತರ ಗಣಕೀಕೃತ ಪಡಿತರ ಚೀಟಿಯನ್ನು ೧೫ನೇ ಆಗಸ್ಟ್ ೨೦೦೫ರ ನಂತರ ನೀಡಲಾಗುವುದು.

ಇ) ಮನೆ ಮನೆ ಸಮೀಕ್ಷೆಯಲ್ಲಿ ಗುರುತಿಸಲಾಗುವ ಎಲ್ಲಾ ಅರ್ಹ ಫಲಾನುಭವಿಗಳಿಗೆ ಬಿಪಿಎಲ್ ಚೀಟಿ ನೀಡಲಾಗುವುದು.

ಈ) ಪಡಿತರ ಚೀಟಿ ವಿತರಿಸಿದ ಮಾಹೆಯಿಂದಲೇ ಪಡಿತರ ಸಾಮಗ್ರಿಗಳನ್ನು ನೀಡಲಾಗುವುದು.